ವನ್ಯಜೀವಿಗಳೂ ವಿಶ್ವ ಪರಂಪರೆಯ ಭಾಗ

ನವಿಲು ಹಾಗೂ ಇನ್ನಿತರ ಅಪರೂಪದ ವನ್ಯಪ್ರಾಣಿಗಳಿಗೆ ನೆಲೆಯಾಗುವ ಅದೃಷ್ಟ ಭಾರತದ್ದು. ಭಾರತದ ರಾಷ್ಟ್ರೀಯ ಲಾಂಛನದಲ್ಲಿ ಕಾಣಿಸಿಕೊಳ್ಳುವ ವನ್ಯಜೀವಿಗಳು, ಭಾರತದ ಪರಿಸರ, ಅರ್ಥ ವ್ಯವಸ್ಥೆ ಹಾಗೂ ಸಂಸ್ಕೃತಿಯ ಪ್ರಮುಖ ಭಾಗ

ವನ್ಯಜೀವಿಗಳು ಭಾರತದ ಶ್ರೀಮಂತ ಪ್ರಕೃತಿ ಪರಂಪರೆಯ ಕೇಂದ್ರ ಬಿಂದು. ಬಂಗಾಳದ ಹುಲಿ, ಏಷ್ಯಾದ ಖಡ್ಗಮೃಗ, ಭಾರತದ ನವಿಲು ಹಾಗೂ ಇನ್ನಿತರ ಅಪರೂಪದ ವನ್ಯಪ್ರಾಣಿಗಳಿಗೆ ನೆಲೆಯಾಗುವ ಅದೃಷ್ಟ ಭಾರತದ್ದು. ಭಾರತದ ರಾಷ್ಟ್ರೀಯ ಲಾಂಛನದಲ್ಲಿ ಕಾಣಿಸಿಕೊಳ್ಳುವ ವನ್ಯಜೀವಿಗಳು, ಭಾರತದ ಪರಿಸರ, ಅರ್ಥ ವ್ಯವಸ್ಥೆ ಹಾಗೂ ಸಂಸ್ಕೃತಿಯ ಪ್ರಮುಖ ಭಾಗವಾಗಿವೆ. ಈಚಿನ ವರ್ಷಗಳಲ್ಲಿ, ಭಾರತ ಕೈಗೊಂಡ ಸಂರಕ್ಷಣಾ ಪ್ರಯತ್ನಗಳಿಂದಾಗಿ ಅಳಿವಿನಂಚಿನಲ್ಲಿರುವ ವನ್ಯಜೀವಿ ಸಂಕುಲದ ಹಲವಾರು ಪ್ರಬೇಧಗಳ ಸಂಖ್ಯೆಯಲ್ಲಿ ಸ್ಥಿರತೆ ಕಾಯ್ದುಕೊಳ್ಳಲು ಸಾಧ್ಯವಾಗಿದೆ. ಆದರೆ ವನ್ಯಜೀವಿಗಳ ಕಳ್ಳಸಾಗಣೆ, ಭಾರತ ಹಾಗೂ ಅಂತಾರಾಷ್ಟ್ರೀಯ ಕಾನೂನು ಜಾರಿ ಸಂಸ್ಥೆಗಳಿಗೆ ಅಂತಕವನ್ನು ಹೆಚ್ಚಿಸುತ್ತಿದೆ. ಆನೆಯ ದಂತ, ಖಡ್ಗಮೃಗದ ಕೊಂಬು, ಹುಲಿಗಳ ದೇಹದ ಭಾಗಗಳಂತಹ ವನ್ಯಜೀವಿ ಉತ್ಪನ್ನಗಳ ಕಾನೂನುಬಾಹಿರ ದಂಧೆಯ ಪ್ರಮಾಣ ವಿಶ್ವ ಮಾರುಕಟ್ಟೆಯಲ್ಲಿ ಈಗ ವಾರ್ಷಿಕ 7–10 ಬಿಲಿಯನ್ ಡಾಲರುಗಳಷ್ಟಿದೆ (ಅಂದರೆ, 35 ಸಾವಿರ –50 ಸಾವಿರ ಕೋಟಿ ರುಪಾಯಿಗಳು) ಎಂದು ಅಂದಾಜಿಸಲಾಗಿದೆ. ಕಳೆದೊಂದು ವರ್ಷದಿಂದ ಕಳ್ಳಸಾಗಣೆಯ ಪ್ರಮಾಣ ಗಣನೀಯವಾಗಿ ಹೆಚ್ಚಿದೆ. ವನ್ಯಜೀವಿಗಳ ಕಳ್ಳಸಾಗಣೆಯು ಕೇವಲ ಭದ್ರತೆಗೆ ಬೆದರಿಕೆಯೊಡ್ಡುವದಿಲ್ಲ, ಬದಲಾಗಿ ಅದು ಕಾನೂನಿನ ಪ್ರಭುತ್ವಕ್ಕೆ ಬೆದರಿಕೆಯೊಡ್ಡಿ, ಕ್ರಿಮಿನಲ್ ಗ್ಯಾಂಗುಗಳಿಗೆ ನಿಧಿ ಪೂರೈಸಿ ಹಾಗೂ ಸ್ಥಳೀಯ ಸಮುದಾಯಗಳ ಆರ್ಥಿಕ ಅವಕಾಶವನ್ನು ಕಿತ್ತುಕೊಳ್ಳುತ್ತದೆ.

ಕಾಂಬೋಡಿಯಾದಲ್ಲಿ ಇತ್ತೀಚೆಗೆ ನಡೆದ ಪೂರ್ವ ಏಷ್ಯಾ ಶೃಂಗ ಸಭೆಯಲ್ಲಿ, ಅಮೆರಿಕದ ಅಧ್ಯಕ್ಷ ಬರಾಕ್ ಒಬಾಮ ಹಾಗೂ ವಿದೇಶಾಂಗ ಸಚಿವೆ ಹಿಲರಿ ಕ್ಲಿಂಟನ್, ವನ್ಯಜೀವಿ ಕಳ್ಳ ಸಾಗಾಣಿಕೆಯ ವಿರುದ್ಧ ಹೋರಾಟ ನಡೆಸುವ ಅಗತ್ಯತೆಯ ಬಗ್ಗೆ ಮಾತನಾಡಿದರು. ಈ ಬಗೆಯ ಪ್ರಯತ್ನಗಳಿಗೆ ಸರ್ಕಾರಗಳ ಪ್ರಯತ್ನದ ಜೊತೆಗೆ ನಾಗರಿಕ ಸಮಾಜ, ಸರ್ಕಾರೇತರ ಸಂಸ್ಥೆಗಳು ಹಾಗೂ ಖಾಸಗಿ ವಲಯಗಳ ಒಟ್ಟಾರೆ ಸಾಮುದಾಯಿಕ ಕ್ರಿಯೆ ಹಾಗೂ ಸಹಕಾರದ ಅಗತ್ಯವಿರುತ್ತದೆ. ಸಾರ್ವಜನಿಕರಲ್ಲಿ ಜಾಗೃತಿ ಹೆಚ್ಚಿಸಲು, ತನಿಖೆ ಹಾಗೂ ಅಭಿಯೋಜನೆಯಲ್ಲಿ ಪ್ರಗತಿ, ಕಾನೂನು ಜಾರಿ ತಂತ್ರಜ್ಞಾನಗಳ ಹಂಚಿಕೆ ಹಾಗೂ ಜಾರಿ ಮಾಡುವ ಅಧಿಕಾರಿಗಳಿಗೆ ಸೂಕ್ತ ತರಬೇತಿ ನೀಡುವ ನಿಟ್ಟಿನಲ್ಲಿ, ಭಾರತ ಹಾಗೂ ಇತರ ಅಂತಾರಾಷ್ಟ್ರೀಯ ಸಮುದಾಯಗಳೊಂದಿಗೆ ಅಮೆರಿಕ ಸಂಯುಕ್ತ ಸಂಸ್ಥಾನ ದುಡಿಯುತ್ತಿದೆ.

ಅಳಿವಿನಂಚಿನಲ್ಲಿರುವ ವನ್ಯಪ್ರಾಣಿ ಹಾಗೂ ಸಸ್ಯಗಳ ಅಂತಾರಾಷ್ಟ್ರೀಯ ವ್ಯಾಪಾರ ಒಡಂಬಡಿಕೆ (Convention on International Trade in Endangered Species of Wild Fauna and Flora -CITES), ಪ್ರಕೃತಿ ಸಂರಕ್ಷಣಾ ಅಂತಾರಾಷ್ಟ್ರೀಯ ಸಂಘ (International Union for the Conservation of Nature -IUCN), ಹಾಗೂ ವಿಶ್ವ ಸಂಸ್ಥೆಯ ಭ್ರಷ್ಟಾಚಾರ ವಿರೋಧಿ ಒಡಂಬಡಿಕೆಯಂಥ ಇನ್ನಿತರ ಅಂತಾರಾಷ್ಟ್ರೀಯ ಬಹುಪಕ್ಷೀಯ ವೇದಿಕೆಗಳಲ್ಲಿ ಭಾರತ ಹಾಗೂ ಅಮೆರಿಕ ಸಂಯುಕ್ತ ಸಂಸ್ಥಾನಗಳು ಒಂದಾಗಿ ದುಡಿಯುತ್ತಿವೆ. ಅಲ್ಲದೇ, ಇಂಟರ್ ಪೋಲ್, ಮಾದಕವಸ್ತು ಮತ್ತು ಅಪರಾಧಗಳಿಗೆ ಸಂಬಂಧಿಸಿದ ವಿಶ್ವಸಂಸ್ಥೆಯ ಕಚೇರಿ ಹಾಗೂ ವಿಶ್ವ ಬ್ಯಾಂಕಿನಂಥ ಸಂಸ್ಥೆಗಳಲ್ಲಿ ವನ್ಯಜೀವಿ ಕಳ್ಳಸಾಗಣಿಕೆ ವಿರುದ್ಧದ ಹೋರಾಟಕ್ಕೆ ಎರಡೂ ದೇಶಗಳು ಜೊತೆಯಾಗಿ ಬೆಂಬಲ ನೀಡುತ್ತಿವೆ.

ಅಮೆರಿಕ ಸಂಯುಕ್ತ ಸಂಸ್ಥಾನದ ಅಂತಾರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆಯ ಏಷಿಯಾದ ಪ್ರಾದೇಶಿಕ ಅಭಿವೃದ್ಧಿ ಮಿಷನ್ ಈಗಾಗಲೇ, 17 ಮಿಲಿಯನ್ ಡಾಲರ್ ಮೊತ್ತವನ್ನು 2005ರಿಂದ ಎಎಸ್‌ಇಎಎನ್ ಅವರ ವನ್ಯಜೀವಿ ಜಾರಿ ಜಾಲದ (ASEAN-WEN) ಮುಖಾಂತರ ವನ್ಯಜೀವಿ ಕಳ್ಳಸಾಗಣೆ ತಡೆಗಟ್ಟುವ ಕಾರ್ಯಕ್ರಮಗಳಲ್ಲಿ ತೊಡಗಿಸಿದೆ.

ಕಾಳಜಿ

■ ನ್ಯಾನ್ಸಿ ಜೆ.ಪೊವೆಲ್
ಅಮೆರಿಕ ರಾಯಭಾರಿ

ಇಂಟರ್ ಪೋಲ್ ನೆರವಿನೊಂದಿಗೆ ದಕ್ಷಿಣ ಏಷ್ಯಾ ವನ್ಯಜೀವಿ ಜಾಲ (SAWEN)ಕ್ಕೆ ಬೆಂಬಲ ನೀಡುವಂಥ ಹಲವಾರು ಕಾರ್ಯಕ್ರಮಗಳ ಮೂಲಕ, ವಿಶ್ವದಾದ್ಯಂತ ಇರುವ ನಮ್ಮ ಪಾಲುದಾರರೊಂದಿಗೆ ಜೊತೆಗೂಡಿ, ವನ್ಯಜೀವಿ ಜಾರಿ ಜಾಲಗಳನ್ನು ಬಲಪಡಿಸುವ ಕಾರ್ಯವನ್ನು ಮುಂದುವರಿಸಿದ್ದೇವೆ. ಪ್ರಾದೇಶಿಕ ವನ್ಯಜೀವಿ ಜಾರಿ ಜಾಲಗಳ ಜಾಗತಿಕ ವ್ಯವಸ್ಥೆಯೊಂದನ್ನು ನಿರ್ಮಿಸಬೇಕು ಎಂದು ಹಿಲರಿ ಕ್ಲಿಂಟನ್ ಅವರು ಕರೆ ನೀಡಿದ್ದಾರೆ. ಈ ದಿಸೆಯಲ್ಲಿ ನಾವು ಎಲ್ಲಾ ಆಸಕ್ತ ಪಾಲುದಾರರೊಂದಿಗೆ ಜತೆಗೂಡಿ ಕೆಲಸ ಮಾಡಲು ಇದಿರುನೋಡುತ್ತಿದ್ದೇವೆ. ಈ ವಿಷಯದಲ್ಲಿ ಅಮೆರಿಕ ವಿಶೇಷ ಆಸಕ್ತಿ ವಹಿಸಲು ಮುಖ್ಯ ಕಾರಣ ಎಂದರೆ, ಈ ಬಗೆಯ ವನ್ಯಜೀವಿಗಳು ಹಾಗೂ ವನ್ಯಜೀವಿ ಉತ್ಪನ್ನಗಳ ಕಳ್ಳಸಾಗಣೆಗೆಯ ಮುಖ್ಯ ಗಮ್ಯ ಸ್ಥಾನ ಹಾಗೂ ಸಾಗಣೆ ಕೇಂದ್ರ ಖುದ್ದು ಅಮೆರಿಕವೇ. ವಿದೇಶಗಳ ಮುದ್ದಿನ ಸಾಕು ಪ್ರಾಣಿಗಳು, ಸರಿಸೃಪಗಳ ಚರ್ಮೋತ್ಪನ್ನಗಳು ಹಾಗೂ ಒಂದಷ್ಟು ಮಟ್ಟಿಗೆ ದಂತ ಹಾಗೂ ಖಡ್ಗಮೃಗದ ಕೊಂಬುಗಳೂ ಕಳ್ಳಸಾಗಣೆಯಾಗುವ ಪಟ್ಟಿಯಲ್ಲಿ ಸೇರಿವೆ. ಈ ಸಮಸ್ಯೆಯ ಹೊಣೆಗಾರಿಕೆಯನ್ನು ಹಂಚಿಕೊಂಡು, ನಾವು ಪರಿಹಾರದ ಭಾಗವಾಗಲು ಬಯಸುತ್ತೇವೆ.

ಭಾರತ ಹಾಗೂ ಅಮೆರಿಕ ವನ್ಯಜೀವಿ ವೃತ್ತಿಪರರ ನಡುವೆ ವಿಶೇಷವಾಗಿ, ಅಮೆರಿಕ ಸಂಯುಕ್ತ ಸಂಸ್ಥಾನದ ಮೀನು ಹಾಗೂ ವನ್ಯಜೀವಿ ಸೇವೆ ಹಾಗೂ ಭಾರತ ವನ್ಯಜೀವಿ ಸಂಸ್ಥೆಗಳ ನಡುವೆ, ದಶಕಗಳ ಸಹಭಾಗಿತ್ವ ಇರುವುದು ನಿಜಕ್ಕೂ ನಮಗೆ ಹೆಮ್ಮೆಯ ವಿಷಯ. ಈ ಬಗೆಯ ಸಹಭಾಗಿತ್ವ ಎರಡೂ ದೇಶಗಳ ನಡುವಣ ನೈಷಣ್ಯದ ಮಟ್ಟವನ್ನು ಹೆಚ್ಚಿಸಿದೆ. ಅಮೆರಿಕ ಹಾಗೂ ಭಾರತ ಸರ್ಕಾರ, ಅಕಾಡೆಮಿಕ್ ಹಾಗೂ ಖಾಸಗಿ ಸಂಸ್ಥೆಗಳ ನಡುವಣ ಅನೇಕ ಕ್ರಿಯಾಶೀಲ ಸಹಭಾಗಿತ್ವಗಳು ಸಮರ್ಥವಾಗಿ ಮುನ್ನಡೆಯುತ್ತಿವೆ. ಇದರಿಂದಾಗಿ, ವನ್ಯಜೀವಿ ಸಂರಕ್ಷಣೆ, ಕಳ್ಳಸಾಗಣೆ ನಿರೋಧಿ (ಪೋಚಿಂಗ್ ತಡೆ) ಹಾಗೂ ವನ್ಯಜೀವಿ ನೆಲೆಗಳಲ್ಲಿ ವಾಸವಾಗಿರುವ ಸಮುದಾಯಗಳ ಅಭಿವೃದ್ಧಿಗೆ ಸಂಬಂಧಿಸಿದ ಹಲವು ಮಹತ್ವದ ವಿಷಯಗಳಲ್ಲಿ ಗಣನೀಯ ಯಶಸ್ಸು ಸಾಧಿಸಲು ಸಾಧ್ಯವಾಗಿದೆ.

ವನ್ಯಜೀವಿಗಳ ಸಂರಕ್ಷಣೆ ಹಾಗೂ ಅವುಗಳ ಕಳ್ಳಸಾಗಣಿಕೆ ನಿಗ್ರಹಿಸಲು ಬದ್ಧರಾಗಿರುವ ಅನೇಕ ಅಂತಾರಾಷ್ಟ್ರೀಯ, ಪ್ರಾದೇಶಿಕ ಹಾಗೂ ಸ್ಥಳೀಯ ಸಂಸ್ಥೆಗಳೊಂದಿಗೆ ನಾವು ಸಹಭಾಗಿಗಳಾಗಿದ್ದೇವೆ.

ವನ್ಯಜೀವಿ ಸಂರಕ್ಷಣಾ ದಿನವಾದ ಡಿಸೆಂಬರ್ 4ರ ಸಂದರ್ಭದಲ್ಲಿ ಸಮರ್ಪಣಾ ಭಾವದಿಂದ ದುಡಿಯುತ್ತಿರುವ ನಮ್ಮ ಅನೇಕ ಭಾರತೀಯ ಸಹಭಾಗಿಗಳಿಗೆ ನನ್ನ ಮೆಚ್ಚುಗೆಗಳು. ಧನ್ಯವಾದ.

(ನ್ಯಾನ್ಸಿ ಜೆ.ಪೊವೆಲ್ ಅವರು ಭಾರತದಲ್ಲಿನ ಅಮೆರಿಕ ರಾಯಭಾರಿಗಳು.)